ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಮೈಲಪ್ಪನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 27.11.15

ಈ ವಾರದ ಮುನ್ಸೂಚನೆ (28-11-15 to 2.12.15 ವರೆಗೆ)

ನಿಯತಾಂಕಗಳು	28/11/15	29/11/15	30/11/15	1/12/15	2/12/15
ಮಳೆ (ಮಿ ಮಿ)	0	0	3	5	5
ಗರಿಷ್ಠ ಉಷ್ಣಾಂಶ(ಡಿ.ಸೆ.)	27	28	26	26	25
ಕನಿಷ್ಠ ಉಷ್ಣಾಂಶ (ಡಿ.ಸೆ.)	16	17	16	17	17
ಮೋಡ (ಪ್ರಮಾಣ)	2	2	5	7	7
ಆರ್ದ್ರತೆ ೭.೨೦ ಬೆ (ಶೇ)	72	73	78	85	90
ಆರ್ದ್ರತೆ ೨.೨೦ ಮ (ಶೇ)	62	63	65	72	77
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	2	2	3	4
ಗಾಳಿಯ ದಿಕ್ಕು (ಡಿಗ್ರಿ)	50	50	70	140	40

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ದಿನಗಳಲ್ಲಿ ಮೋಡ ಕವಿದ ವಾತಾವರಣವಿರಲಿದ್ದು, ತುಂತುರು ಮಳೆಯಾಗುವ ನಿರೀಕ್ಷೆಯಿದೆ. ದಿನದ ಗರಿಷ್ಠ ಉಷ್ಣಾಂಶವು 25-28^{o}C ಮತ್ತು ಕನಿಷ್ಠ 16-17^{o}C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 72-85% ಇದ್ದು, ಮಧ್ಯಾಹ್ನ 62-77 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 2-4 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ಮುಂದಿನ ದಿನಗಳಲ್ಲಿ ಒಣಹವೆ ಮುಂದುವರಿಯಲಿದ್ದು, ಕೆಲವು ಕಡೆ ಹಗುರವಾದ ಮಳೆಯ ನಿರೀಕ್ಷೆಯಿದೆ.
- ✓ ಬಸಿಗಾಲುವೆಗಳನ್ನು ಸ್ವಚ್ಚ ಮಾಡಿ ಹೊಲದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳುವುದು.
- ✓ ರಾಗಿತೆನೆಯು ನೆಲಕ್ಕೆ ಬಾಗುವುದನ್ನು ತಪ್ಪಿಸಲು ಎಂಟರಿಂದ ಹತ್ತು ಗಿಡಗಳನ್ನು ಒಟ್ಟಿಗೆ ಸೇರಿಸಿ ಕಟ್ಟಬೇಕು
- ✓ ಬೆಳೆಗಳ ಕಟಾವನ್ನು ಮುಂದೂಡಬೇಕು.
- ✓ ತೇವಾಂಶದ ಪ್ರಮಾಣ ಹೆಚ್ಚಾಗಿರುವುದರಿಂದ ರೇಷ್ಮೆ ಮತ್ತು ಕೋಳಿಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
- ✓ ಅಲಸಂದೆ, ಹುರುಳಿ, ಅಲ್ಪಾವಧಿ ಸೂರ್ಯಕಾಂತಿ, ಹುಚ್ಚೆಳ್ಳು ಬೆಳೆಗಳನ್ನು ಬಿತ್ತನೆಮಾಡಬಹುದು.

ಹಿಂಗಾರು ಬೆಳೆಗಳು:

ಕೆಂಪು ಮಣ್ಣಿಗೆ ಸೂಕ್ತವಾದ ಬೆಳೆಗಳು: ಶಕ್ತಿಮಾನ್ ಮುಸುಕಿನ ಜೋಳ (ಗಂಗಾ–11, ಡೆಕ್ಕನ್–103, ವಿಜಯ ಕಾಂಪೋಸಿಟ್, ಎನ್.ಎ,ಹೆಚ್–1137), ಪಾಪ್ ಕಾರ್ನ್ (ಅಂಬರ್), ಸೂರ್ಯಕಾಂತಿ (ಮಾರ್ಡೆನ್, ಕೆ.ಬಿ.ಎಸ್.ಹೆಚ್–1, 41,42,44 ಮತ್ತು 53), ರಾಗಿ (ಇಂಡಾಫ್–7, ಇಂಡಾಫ್–9, ಇಂಡಾಫ್–15 ಮತ್ತು ಎಮ್.ಎಲ್–365) ಮತ್ತು ಅವರೆ (ಹೆಚ್.ಎ.–3, ಹೆಚ್–4).

- ✓ **ಕಡಲೆ, ಈರುಳ್ಳಿ ಇತ್ಯಾದಿ ಬೆಳೆಗಳನ್ನು ಬಿತ್ತನೆ ಮಾಡಬಹುದು. ಹುರುಳಿ**–ಕೆ.ಬಿ.ಹೆಚ್–೧, ಎಫ್.ಹೆಚ್.ಜಿ.–೯, **ಅವರೆ**–ಹೆಚ್.ಎ–೧, ೩, ೪, **ಪಾಪ್‌ಕಾರ್ನ್**: ಅಂಬರ್. **ಅಲಸಂದೆ**: ಟಿ.ವಿ.ಎಕ್ಸ್–೯೪೪, ಕೆ.ಎಮ್–5, ಅಥವಾ ತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಸಸ್ಯ ಸಂರಕ್ಷಣೆ:

- ✓ ಹಗುರವಾದ ಮಳೆಯ ನಿರೀಕ್ಷೆ ಇರುವುದರಿಂದ ಔಷಧಿ ಸಿಂಪಡಣೆ ಮುಂದೂಡಬೇಕು.

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು